◆ **ನೀವು ಪತ್ನಿ, ತಾಯಿ, ಶಿಕ್ಷಕಿ, ಸಾರ್ವಜನಿಕ ಸೇವಾ ಆಯೋಗದ ಸದಸ್ಯೆ ಮತ್ತು ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರೂ ಆಗಿದ್ದಿರಿ. ಇಷ್ಟೆಲ್ಲ ಕಾರ್ಯಗಳ ಮಧ್ಯೆ ಇಷ್ಟೊಂದು ಸಾಹಿತ್ಯ ಕೃತಿಗಳನ್ನು ರಚಿಸಲು ಸಮಯವನ್ನು ಹೇಗೆ ನಿರ್ವಹಿಸುತ್ತೀರಿ? ನಿಮ್ಮ ಗಡಿಯಾರದಲ್ಲಿ ಹೆಚ್ಚಿನ ಸಂಖ್ಯೆಗಳಿವೆಯೇ?**

ನಿಮ್ಮ ಜೀವನದಲ್ಲಿ ನಿರ್ವಹಿಸುವ ಪಾತ್ರಗಳನ್ನು ನೀವು ಇಷ್ಟಪಟ್ಟರೆ, ಸಮಯವು ಸಮಸ್ಯೆಯಲ್ಲ. ಸಮಯ ವ್ಯರ್ಥ ಮಾಡುವವರು ಮಾತ್ರ 'ಸಾಕಷ್ಟು ಸಮಯವಿಲ್ಲ' ಎಂದು ದೂರುತ್ತಿರುತ್ತಾರೆ.

◆ **ನೀವು ಪ್ರವಾಸವನ್ನು ತುಂಬಾ ಇಷ್ಟಪಡುತ್ತೀರಿ. ಸೋವಿಯತ್ ಯೂನಿಯನ್, ಆಸ್ಟ್ರೇಲಿಯಾ, ಅಮೆರಿಕ, ಬ್ರಿಟನ್, ಸ್ವೀಡನ್, ಫ್ರಾನ್ಸ್, ಜರ್ಮನಿ, ಜಪಾನ್, ಚೀನಾ- ಹೀಗೆ ಅನೇಕ ದೇಶಗಳನ್ನು ಸುತ್ತಿದ್ದೀರಿ. ಹಲವು ಪ್ರವಾಸ ಕಥನಗಳನ್ನೂ ಬರೆದಿದ್ದೀರಿ. ಅನೇಕ ಅಂತರರಾಷ್ಟ್ರೀಯ ಸಾಹಿತ್ಯ ಸಮ್ಮೇಳನ, ಸಾಹಿತ್ಯ ಉತ್ಸವ, ವಿಚಾರ ಸಂಕಿರಣ, ಪುಸ್ತಕ ಮೇಳಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದೀರಿ. ಈ ಭಾಗವಹಿಸುವಿಕೆಗಳು ಬರಹಗಾರ್ತಿಯಾಗಿ ನಿಮ್ಮ ಅನುಭವವನ್ನು ಶ್ರೀಮಂತಗೊಳಿಸಿವೆಯೇ? ನಿಮ್ಮ ಪ್ರಕಾರ, ಭಾರತೀಯೇತರ ಓದುಗರ ಹೃದಯದಲ್ಲಿ ಭಾರತೀಯ ಸಾಹಿತ್ಯವು ಯಾವ ಸ್ಥಾನವನ್ನು ಹೊಂದಿದೆ?**



ವಿವಿಧ ಭಾಷೆ ಮತ್ತು ದೇಶಗಳ ಲೇಖಕರು ಮತ್ತು ಓದುಗರನ್ನು ಭೇಟಿಯಾಗುವುದು ಹೃದಯಸ್ಪರ್ಶಿ ಆಗಿರುತ್ತದೆ, ಆತ್ಮವನ್ನು ತಲಪುತ್ತದೆ. ಅಂತಿಮವಾಗಿ ಸ್ವಂತಿಕೆಯನ್ನು ಶ್ರೀಮಂತಗೊಳಿಸುತ್ತದೆ. ಪ್ರವಾಸವು ಒಬ್ಬ ವ್ಯಕ್ತಿಗೆ, ವಿಶೇಷವಾಗಿ ಬರಹಗಾರ್ತಿಯಾಗಿ ನನಗೆ ಜೀವಮಾನದ ಯಾನವಾಗಿದೆ.

◆ **ನಿಮ್ಮ ಸಾಹಿತ್ಯ ಕೃತಿಗಳ ಶೀರ್ಷಿಕೆಗಳು ಚುಟುಕಾಗಿದ್ದು, ವಿಶಿಷ್ಟ ಹಾಗೂ ಆಕರ್ಷಕವಾಗಿರುತ್ತವೆ. ಧ್ವನಿಪೂರ್ಣವೂ ಹೌದು. ನಿಮ್ಮ ಮನೆಯ ಹೆಸರನ್ನೇ ನೋಡಿ–'ಆಖ್ಯಾಯಿಕಾ...'**

ಹೌದು, ನನ್ನ ಸಾಹಿತ್ಯ ಕೃತಿಗಳಿಗೆ ಹೆಸರಿಡಲು ಬಹಳ ಸಮಯ ತೆಗೆದುಕೊಳ್ಳುತ್ತೇನೆ. ಕಾದಂಬರಿ ಬರೆಯುತ್ತಿರುವಾಗಲೇ ನಾನು ನಿರಂತರವಾಗಿ ಶೀರ್ಷಿಕೆಯ ಬಗ್ಗೆ ಯೋಚಿಸುತ್ತೇನೆ. ಅನೇಕ ಶೀರ್ಷಿಕೆಗಳನ್ನು ತಿರಸ್ಕರಿಸಿ ನಂತರ ಒಂದನ್ನು ಆಯ್ಕೆ ಮಾಡುತ್ತೇನೆ. ಸಾಹಿತ್ಯ ಕೃತಿಗೆ ಶೀರ್ಷಿಕೆ ಬಹಳ ಮುಖ್ಯವಾದದ್ದು ಎಂದು ನಾನು ನಂಬುತ್ತೇನೆ. ಅದು ಅರ್ಥಪೂರ್ಣವೂ ವಿಶಿಷ್ಟವೂ ಆಗಿರಬೇಕು. ನನ್ನ ಮನೆಯ ಹೆಸರು 'ಆಖ್ಯಾಯಿಕಾ'. ಅಂದರೆ ಆಖ್ಯಾನ, ಉಪನ್ಯಾಸ, ಕಿಂವದಂತಿ. ಮನೆಯೆಂಬುದು ಮಾನವ ಭಾವನೆಗಳನ್ನು, ಸಂಘರ್ಷಮಯ ಹಾಗೂ ಸಂಕೀರ್ಣವಾದ ಮನುಷ್ಯ ಸಂಬಂಧಗಳನ್ನು ನಿರ್ವಹಿಸುವ ಕಥೆ–ಕಾದಂಬರಿಗಳ ನಿಧಿಯೇ ಆಗಿದೆ.

◆ **ಪ್ರಸ್ತುತ ನೀವು ಏನು ಬರೆಯುತ್ತಿದ್ದೀರಿ?**

ಇದೀಗ ನಾನು ನನ್ನ ಇಪ್ಪತ್ತಾರನೇ ಕಾದಂಬರಿಯ ಬರವಣಿಗೆಯನ್ನು ಪ್ರಾರಂಭಿಸಿದ್ದೇನೆ. ಪ್ರಕಟಣೆಗೆ ಮೊದಲು ನಾನು ಎಂದಿಗೂ ಅದರ ವಸ್ತು–ವಿಷಯವನ್ನು ಬಹಿರಂಗಪಡಿಸುವುದಿಲ್ಲ. ನನ್ನ ಓದುಗರು ಮುಂಬರುವ ಕಾದಂಬರಿಯ ಬಗ್ಗೆ ನಿರಂತರವಾಗಿ ಕೇಳುತ್ತಿರುತ್ತಾರೆ. ಅದಕ್ಕೆ ನನ್ನ ಉತ್ತರವೆಂದರೆ, 'ಅದು ನನ್ನದಾಗಿರುವವರೆಗೂ ರಹಸ್ಯವಾಗಿಯೇ ಇರುತ್ತದೆ. ಪ್ರಕಟವಾದಾಗ ಅದು ನಿಮ್ಮದು'.

●